ಹೊಸ ದಿಗಂತ Page-4 15/12/2016

## ವಿದ್ಯುತ್ ಸ್ಪರ್ಶಿಸಿ ಯೋಧ ಸಾವು

ಮೈಸೂರು: ಗುಜರಾತ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ವಿದ್ಯುತ್ ಸ್ಪರ್ಶಕ್ಕೊಳಗಾಗಿ ಮೈಸೂರು ಜಿಲ್ಲೆಯ ಯೋಧರೊಬ್ಬರು ಸಾವನ್ನಪ್ಪಿದ್ದಾರೆ.

ಮೈಸೂರು ಜಿಲ್ಲೆ ಹುಣಸೂರು ತಾಲೂಕಿನ ದೇವಗಳ್ಳಿ ಗ್ರಾಮದ ನಿವಾಸಿಯಾಗಿರುವ ಪಳನಿಸ್ವಾಮಿ ಎಂಬುವರ ಪುತ್ರ ಸುಬ್ರಹ್ಮಣ್ಯನ್(33) ಮೃತಪಟ್ಟವರು.ಕಳೆದ ಎಂಟು ವರ್ಷದಿಂದ ಭಾರತೀಯ ಸೇನೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸುಬ್ರಹ್ಮಣ್ಯನ್ ಅವರಿಗೆ ಐದು ವರ್ಷದ ಹಿಂದೆ ಮದುವೆಯಾಗಿತ್ತು. ಅವರಿಗೆ ಇಬ್ಬರು ಪುಟ್ಟ ಮಕ್ಕಳಿದ್ದಾರೆ. ಮಂಗಳವಾರದಂದು ಮನೆಗೆ ಕರೆ ಮಾಡಿ ಮಗುವಿನ ಹುಟ್ಟುಹಬ್ಬಕ್ಕೆ ಶುಭ ಕೋರಿದ್ದರು. ಅಂದೇ ಅವಘಡದಿಂದ ಪ್ರಾಣ ಕಳೆದುಕೊಂಡಿದ್ದಾರೆ. ಯೋಧನ ಸಾವಿನ ಸುದ್ದಿ ಕೇಳಿ ಕುಟುಂಬದ ಸದಸ್ಯರು ತೀವ್ರ ದುಃಖಿತಪ್ಪರಾಗಿದ್ದಾರೆ. ಮೃತ ಯೋಧನ ಪಾರ್ಥಿವ ಶರೀರ ಗುರುವಾರ ಅವರ ಸ್ವಗ್ರಾಮಕ್ಕೆ ಆಗಮಿಸಲಿದೆ.

ಸಂಯುಕ್ತ ಕರ್ನಾಟಕ 15-12-2016 P3

## ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿದ್ಯುತ್ ಕಾಮಗಾರಿ ಇರುವ ಹಿನ್ನೆಲೆಯಲ್ಲಿ ಡಿ.16 ರಂದು ಬೆಳಗ್ಗೆ 9 ರಿಂದ 7ರವರೆಗೆ '66/11ಕೆ.ವಿ ಎಚ್‌ಬಿಆರ್ ಮತ್ತು ಗೆದ್ದಲಹಳ್ಳಿ ಸ್ಟೇಷನ್' ವಿದ್ಯುತ್ ಉಪ-ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

'66/11ಕೆ.ವಿ ಎಚ್‌ಬಿಆರ್ ಮತ್ತು ಗೆದ್ದಲಹಳ್ಳಿ ಸ್ಟೇಷನ್'ನಲ್ಲಿ ವಿದ್ಯುತ್ ಕಾಮಗಾರಿ ಇರುವ ಹಿನ್ನೆಲೆಯಲ್ಲಿ ಎಚ್.ಬಿ.ಆರ್. 3ನೇ ಬ್ಲಾಕ್, ಟೀಚರ್ಸ್ ಕಾಲೋನಿ, ರಾಮದೇವಗಾರ್ಡನ್ ಯಾಸಿನ್ ನಗರ, ಸುಭಾಶ್ ಲೇಔಟ್, ಆಯಿಲ್ ಮಿಲ್‌ರಸ್ತೆ, ಮಂಗಳಲೇಔಟ್, ಕರಿಯನಪಾಳ್ಯ, ಕೆ.ಎಸ್.ಎಫ್.ಸಿ ಲೇಔಟ್, ಕಚರಕನಹಳ್ಳಿ, ಅರವಿಂದನಗರ, ಲೋಕೇಶ್ ಟೆಂಟ್‌ರಸ್ತೆ, ಭಾರತಿಯಾರ್ ರಸ್ತೆ, ಕಮ್ಮನಹಳ್ಳಿ ಮುಖ್ಯರಸ್ತೆ ಭಾಗ, ಮೇಯರ್ ಶಂಕರ್ ರಸ್ತೆ, ಕಚರಕನಹಳ್ಳಿ, ಜಲವಾಯು ವಿಹಾರ, ಎಚ್.ಆರ್.ಬಿ.ಆರ್. ಲೇಔಟ್, 2ನೇ ಬ್ಲಾಕ್, 3ನೇ ಬ್ಲಾಕ್, ಬಿ.ಟಿ. ಎಸ್. ಡಿಪೋ ಹಿಂಭಾಗ, ರಾಮಯ್ಯ ಲೇಔಟ್, ಹಾರ್ಮೋನಿ ಅಪಾರ್ಟ್‌ಮೆಂಟ್, ನಾಗದೇವಿ ಇಂಡಸ್ಟ್ರೀಸ್, ಕರಮಚಂದ್ರ ಲೇಔಟ್, ಅಮಲ ಇಂಜಿನಿಯರಿಂಗ್, ಜಾನಕಿರಾಮ್ ಲೇಔಟ್, ಬಾಣಸವಾಡಿರೈಲ್ವೆ ಸ್ಟೇಷನ್‌ರಸ್ತೆ ವ್ಯಾಪ್ತಿಗಳಲ್ಲಿ ಡಿ.16ರಂದು ಬೆಳಗ್ಗೆ 9 ರಿಂದ ಸಂಜೆ 7ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಪ್ರಜಾವಾಣಿ, Pg-3A, 15/12/2016

## ನಾಳೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪೆನಿ (ಬೆಸ್ಕಾಂ) ಎಚ್.ಬಿ.ಆರ್ ಮತ್ತು ಗೆದ್ದಲಹಳ್ಳಿ ಸ್ಟೇಷನ್‌ನ 66/11 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತುನಿರ್ವಹಣಾ ಕಾಮಗಾರಿ ನಡೆಸಲಿರುವ ಕಾರಣ ಇದೇ 16ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 7 ರವರೆಗೆ ಹಲವೆಡೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಎಚ್.ಬಿ.ಆರ್ 3ನೇ ಬ್ಲಾಕ್, ಟೀಚರ್ಸ್ ಕಾಲೊನಿ, ಕಮ್ಮನಹಳ್ಳಿ ಮುಖ್ಯರಸ್ತೆ, ಕಾಚರಕನಹಳ್ಳಿ, ಬಾಣಸವಾಡಿ ರೈಲು ನಿಲ್ದಾಣ, ಹೆಣ್ಣೂರು ಮುಖ್ಯರಸ್ತೆ, ನಾಗವಾರ ಮುಖ್ಯರಸ್ತೆ, ಕೆ.ನಾರಾಯಣಪುರ, ರಶದ್‌ನಗರ, ರಾಮಯ್ಯ ಲೇಔಟ್, ಬೈರತಿಹಳ್ಳಿ, ಥಣಿಸಂದ್ರ, ಕಾವೇರಿ ಲೇಔಟ್, ಬೈರನಕುಂಟೆ, ಬಿಳಿಶಿವಾಲೆ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.



ಪ್ರಜಾವಾಣಿ Pg-01 15/12/2016

## ಹಳೆ ₹500 ಚಲಾವಣೆ ಇಂದೇ ಕೊನೆ

ನವದೆಹಲಿ (ಪಿಟಿಐ): ವಿದ್ಯುತ್, ನೀರು ಮತ್ತಿತರ ಬಿಲ್ ಪಾವತಿ ಅಥವಾ ಸರ್ಕಾರಿ ಆಸ್ಪತ್ರೆಯಲ್ಲಿ ಔಷಧ ಖರೀದಿಗೆ ಹಳೆಯ ₹500 ನೋಟು ಬಳಸಲು ಗುರುವಾರ ಮಧ್ಯರಾತ್ರಿ ವರೆಗೆ ಮಾತ್ರ ಅವಕಾಶ ಇದೆ.

ಕೆಲವು ಅಗತ್ಯ ಸೇವೆಗಳಿಗೆ ಹಳೆಯ ₹500 ನೋಟನ್ನು ಡಿ. 15 ರವರೆಗೆ ಬಳಸಲು ಸರ್ಕಾರ ಅವಕಾಶ ಕೊಟ್ಟಿತ್ತು. ಅದನ್ನು ವಿಸ್ತರಿಸುವುದಿಲ್ಲ ಎಂದು ಸರ್ಕಾರ ಸ್ಪಷ್ಟಪಡಿಸಿದೆ.

ಮೊಬೈಲ್ ರೀಚಾರ್ಜ್ ಮಾಡುವುದಕ್ಕೂ ಶುಕ್ರವಾರದ ನಂತರ ಹಳೆಯ ₹500 ನೋಟುಗಳನ್ನು ಬಳಸುವಂತಿಲ್ಲ. ಹಾಗಾಗಿ ಹಳೆಯ ₹500 ನೋಟು ವ್ಯರ್ಥವಾಗುವುದನ್ನು ತಪ್ಪಿಸಲು ಅವುಗಳನ್ನು ಬ್ಯಾಂಕ್ ಖಾತೆಗಳಿಗೆ ಜಮೆ ಮಾಡುವುದಕ್ಕೆ ಈ ತಿಂಗಳ 30ರವರೆಗೆ ಅವಕಾಶ ಇದೆ ಎಂದು ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಶಕ್ತಿಕಾಂತ ದಾಸ್ ಟ್ವೀಟ್ ಮೂಲಕ ತಿಳಿಸಿದ್ದಾರೆ.

ಹೊಸ ದಿಗಂತ Page-4 15/12/2016

## ವಿದ್ಯುತ್ ಸ್ಪರ್ಶಿಸಿ ಯೋಧ ಸಾವು

ಮೈಸೂರು: ಗುಜರಾತ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ವಿದ್ಯುತ್ ಸ್ಪರ್ಶಕ್ಕೊಳಗಾಗಿ ಮೈಸೂರು ಜಿಲ್ಲೆಯ ಯೋಧರೊಬ್ಬರು ಸಾವನ್ನಪ್ಪಿದ್ದಾರೆ.

ಮೈಸೂರು ಜಿಲ್ಲೆ ಹುಣಸೂರು ತಾಲೂಕಿನ ದೇವಗಳ್ಳಿ ಗ್ರಾಮದ ನಿವಾಸಿಯಾಗಿರುವ ಪಳನಿಸ್ವಾಮಿ ಎಂಬುವರ ಪುತ್ರ ಸುಬ್ರಹ್ಮಣ್ಯನ್(33) ಮೃತಪಟ್ಟವರು.ಕಳೆದ ಎಂಟು ವರ್ಷದಿಂದ ಭಾರತೀಯ ಸೇನೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸುಬ್ರಹ್ಮಣ್ಯನ್ ಅವರಿಗೆ ಐದು ವರ್ಷದ ಹಿಂದೆ ಮದುವೆಯಾಗಿತ್ತು. ಅವರಿಗೆ ಇಬ್ಬರು ಪುಟ್ಟ ಮಕ್ಕಳಿದ್ದಾರೆ. ಮಂಗಳವಾರದಂದು ಮನೆಗೆ ಕರೆ ಮಾಡಿ ಮಗುವಿನ ಹುಟ್ಟುಹಬ್ಬಕ್ಕೆ ಶುಭ ಕೋರಿದ್ದರು. ಅಂದೇ ಅವಘಡದಿಂದ ಪ್ರಾಣ ಕಳೆದುಕೊಂಡಿದ್ದಾರೆ. ಯೋಧನ ಸಾವಿನ ಸುದ್ದಿ ಕೇಳಿ ಕುಟುಂಬದ ಸದಸ್ಯರು ತೀವ್ರ ದುಃಖಿತಪ್ಪರಾಗಿದ್ದಾರೆ. ಮೃತ ಯೋಧನ ಪಾರ್ಥಿವ ಶರೀರ ಗುರುವಾರ ಅವರ ಸ್ವಗ್ರಾಮಕ್ಕೆ ಆಗಮಿಸಲಿದೆ.